# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಟಿ.ಶಿವಾಜಿ, ಕಿರಿಯ ಇಂಜಿನಿಯರ್ (ನಿವೃತ್ತ) ಹಾಗೂ ಶ್ರೀ ಸೈಯದ್ ಗೌಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರುಗಳ ವಿರುದ್ಧ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 84 ಇಎನ್‌ಕ್ಯೂ 2017, ಬೆಂಗಳೂರು ದಿನಾಂಕ: 28.07.2018

*****

ಶ್ರೀ ಟಿ. ಶಿವಾಜಿ, ಕಿರಿಯ ಇಂಜಿನಿಯರ್ (ನಿವೃತ್ತ) ಹಾಗೂ ಶ್ರೀ ಸೈಯದ್ ಗೌಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರುಗಳು ಈ ಹಿಂದೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಸೊರಬ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ 2013-14 ಮತ್ತು 2014-15ನೇ ಸಾಲಿನಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇದ್ದರೂ ಸಹ ಬಿಲ್ ಪಾಸ್ ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಿ ಕ್ರಮವಾಗಿ ರೂ. 4.75 ಲಕ್ಷ ಹಾಗೂ ರೂ. 40.76 ಲಕ್ಷ ಅವ್ಯವಹಾರ ಎಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿರುತ್ತಾರೆ.

ಸದರಿಯವರುಗಳು ಜವಾಬ್ದಾರಿಯುತ ನೌಕರರಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸದೇ ಇದ್ದರೂ ಸಹ ಬಿಲ್ ಪಾಸ್ ಮಾಡಿ ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಗಳನ್ನು ನಿರ್ವಹಿಸಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿ ತೀವ್ರ ದುರ್ನಡತೆ ಎಸಗಿರುವ ಕಾರಣ ಸದರಿಯವರ ವಿರುದ್ಧ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಬೇಕೆಂದು ಸರ್ಕಾರವು ತೀರ್ಮಾನಿಸಿದೆ.

ಆದ್ದರಿಂದ, ಶ್ರೀ ಟಿ.ಶಿವಾಜಿ, ಕಿರಿಯ ಇಂಜಿನಿಯರ್ (ನಿವೃತ್ತ) ಹಾಗೂ ಶ್ರೀ ಸೈಯದ್ ಗೌಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರುಗಳ ವಿರುದ್ಧ ಮೇಲೆ ತಿಳಿಸಿರುವ ಆರೋಪದ ಕುರಿತು ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ) ನಿಯಮಗಳು, 1957 ರ ನಿಯಮ 11, 11ಎ ರಲ್ಲಿ ನಿಗಧಿಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಿ ನಡೆಸಲು ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 214 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಂಜೂರಾತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

28/7/2018

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ, ಶಿವಮೊಗ್ಗ
5. ಶ್ರೀ ಟಿ. ಶಿವಾಜಿ, ಕಿರಿಯ ಇಂಜಿನಿಯರ್ (ನಿವೃತ್ತ), ನಂ.106, ವಿಜಯಲಕ್ಷ್ಮೀ ಎನ್.ಕ್ಯೂ. ಡುಬಾಸಿಪಾಳ್ಯ, ಹೊಲಗೇರಿಹಳ್ಳಿ, ಆರ್.ವಿ.ಕಾಲೇಜು ಪೋಸ್ಟ್, ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು-59.
6. ಶ್ರೀ ಸೈಯದ್ ಗೌಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ), 6ನೇ ಕ್ರಾಸ್, 100 ಅಡಿ ರಸ್ತೆ, ನೈಟಿಂಗೇಲ್ ಇಂಗ್ಲೀಷ್ ಸ್ಕೂಲ್ ಹತ್ತಿರ, ಖಾಜಿನಗರ, ಶಿವಮೊಗ್ಗ - 577202
7. ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿ